

# ನೃತ್ಯ ಪ್ರತಿಭೆ

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ನಾಣ್ಣುಡಿ ಕೆಲವರಿಗೆ ಒಪ್ಪುತ್ತದೆ. ಮಂಗಳೂರಿನ ಪುಟ್ಟ ಪೋರಿಯೊಬ್ಬಳು ತನ್ನ ಪ್ರತಿಭೆಯ ಕೀರ್ತಿಯನ್ನು ದೇಶದಾದ್ಯಂತ ಪಸರಿಸಿ ನಾಣ್ಣುಡಿಯ ಮಾತನ್ನು ಉಳಿಸಿದ್ದಾಳೆ. ಆಕೆಯ ಹೆಸರು ಜ್ಞಾನಾ ಐತಾಳ್. ತನ್ನ ಐದನೇ ವಯಸ್ಸಿನಲ್ಲಿ ನಾಟ್ಯ ಕ್ಷೇತ್ರ ಪ್ರವೇಶಿಸಿದ ಆಕೆ ಈಗ ದೇಶ ಪ್ರಸಿದ್ಧ 'ಪುಟ್ಟ' ಪ್ರತಿಭೆ.

ಈಗ ಈಕೆಗೆ 10 ವರ್ಷ. ಮಂಗಳೂರಿನ ಉರ್ವಾ ಕೆನರಾ ಸ್ಕೂಲ್‌ನಲ್ಲಿ ಐದನೇ ತರಗತಿ ವ್ಯಾಸಂಗ ಮಾಡುತ್ತಿದ್ದಾಳೆ. ಹಟ ಹಿಡಿದು ಆಡುವ ವಯಸ್ಸಿನಲ್ಲಿ ಕಾಲಿಗೆ ಗೆಜ್ಜೆ ಕಟ್ಟಿದ ಈ ಪೋರಿ ವಯೋಮಾನಕ್ಕೂ ಮೀರಿ ಹಲವು ಕಲೆಗಳನ್ನು ಕರಗತ ಮಾಡಿಕೊಂಡಿದ್ದಾಳೆ. ನೃತ್ಯ ಕ್ಷೇತ್ರದ ಪ್ರಮುಖ ಕಲೆಯಾದ ಕಥಕನ್ನು ಪ್ರಥಮ್ ಪ್ರಸಾದ್ ಅವರ ಬಳಿ ಮತ್ತು ಒಡಿಸ್ಸೀ ನೃತ್ಯವನ್ನು ಗೀತಾಂಜಲಿ ಅವರಲ್ಲಿ ಕಲಿಯುತ್ತಿದ್ದಾಳೆ.

ಭಾರತೀಯ ಸಾಂಸ್ಕೃತಿಕ ಕಲೆಯಾದ ಭರತನಾಟ್ಯವನ್ನು ವಿದ್ಯಾಶ್ರೀ ರಾಧಾಕೃಷ್ಣ ಅವರಲ್ಲೂ ಮತ್ತು ಶಾಸ್ತ್ರೀಯ ಸಂಗೀತವನ್ನು ಸರೋಜಮ್ಮ ಅವರ ಹತ್ತಿರ ಅಭ್ಯಾಸ ಮಾಡುತ್ತಿದ್ದಾಳೆ. ಇದರ ಜೊತೆಗೆ ಚಿತ್ರಕಲೆಯಲ್ಲೂ ಪಳಗುವ ಹಾದಿಯಲ್ಲಿದ್ದಾಳೆ. ಈ ಸಣ್ಣ ವಯಸ್ಸಿನಲ್ಲಿ ನಿರಂತರ ಒಂದುಗಂಟೆಯ ಕಾಲ ಭರತನಾಟ್ಯ ಕಾರ್ಯಕ್ರಮ ನೀಡಿ ಜ್ಞಾನ ಸಾಹಸ ಮೆರೆದಿದ್ದಾಳೆ.

ಝೀ ಕನ್ನಡ ವಾಹಿನಿಯು ಏರ್ಪಡಿಸಿದ್ದ ಕುಣಿಯೋಣು ಬಾರಾ ವೇದಿಕೆಯನ್ನು ಭೂಮಿಕೆಯಾಗಿ ಮಾಡಿಕೊಂಡ ಈಕೆ ಒಂದಾದ ಮೇಲೊಂದರಂತೆ ದೇಶವ್ಯಾಪಿ 300ಕ್ಕೂ ಹೆಚ್ಚಿನ ಕಾರ್ಯಕ್ರಮಗಳನ್ನು ನೀಡಿದ್ದಾಳೆ. ಕುಣಿಯೋಣು ಬಾರಾ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನವನ್ನು ತನ್ನ ಮಡಿಲಿಗೆ ಗಿಟ್ಟಿಸಿಕೊಳ್ಳುವುದರೊಡನೆ ಕರಾವಳಿಯ ಪ್ರಥಮ ಸ್ಪರ್ಧಿಯಾಗಿ ರೂಪುಗೊಂಡಳು. ಅದೇ ರೀತಿ ಝೀ ಕನ್ನಡದ 2009ರ ಕುಣಿಯೋಣು ಬಾರಾ ಕಾರ್ಯಕ್ರಮದ ಗುರು-ಶಿಷ್ಯ ವೇದಿಕೆಯಲ್ಲಿಯೂ ಫೈನಲ್‌ಗೆ ಪೈಪೋಟಿ ನೀಡಿದ್ದರು.



ಹಿಂದಿ ವಾಹಿನಿ ಒಂದರಲ್ಲಿ ದಕ್ಷಿಣ ಭಾರತ ಸ್ಪರ್ಧಿಗಳಿಗೆ ಅವಕಾಶ ಕಡಿಮೆ ಎಂಬ ಮಾತಿದೆ. ಈ ಮಾತಿಗೆ ಅಪವಾದ ಎನ್ನುವಂತೆ ಈಕೆ ಝೀ ಹಿಂದಿ ವಾಹಿನಿಯ ಡ್ಯಾನ್ಸ್ ಇಂಡಿಯಾ ಡ್ಯಾನ್ಸ್ ಕಾರ್ಯಕ್ರಮದಲ್ಲಿ ಅವಕಾಶ ಗಿಟ್ಟಿಸಿದಳು. ಒಂದು ಲಕ್ಷದ ಇಪ್ಪತ್ತೈದು ಸಾವಿರ ಸ್ಪರ್ಧಿಗಳ ಪೈಕಿ ಆಯ್ಕೆಗೊಂಡ ದಕ್ಷಿಣ ಭಾರತದ ಪ್ರಥಮ ಸ್ಪರ್ಧಿ ಎಂಬ ಹಗ್ಗಳಿಕೆಯೂ ಈಕೆಯ ಮಡಿಲಿಗಿದೆ, ಈ ಕಾರ್ಯಕ್ರಮದಲ್ಲಿ ಟಾಪ್-20ರಲ್ಲಿ ಟಾಪ್-12 ರವರೆಗೂ ಕಾದಾಡಿ ತನ್ನ ಛಾಪನ್ನು ಬೀರಿದ್ದಾಳೆ.

ಈಗಾಗಲೇ ಭರತನಾಟ್ಯದಲ್ಲಿ ರಾಷ್ಟ್ರಮಟ್ಟದ ಉದ್ಭವ ಪ್ರಶಸ್ತಿ, ಕುಣಿಯೋಣು ಬಾರಾ ಪ್ರಶಸ್ತಿ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ, ವಿಶ್ವಕಲಾ ಪ್ರಶಸ್ತಿ, ಲಯನ್ಸ್ ಕ್ಲಬ್ ಪ್ರಶಸ್ತಿ, ಯಂಗ್ ಎಚಿವರ್ ಪ್ರಶಸ್ತಿ ಸೇರಿದಂತೆ ಅನೇಕ ಸ್ಥಳೀಯ ಮತ್ತು ರಾಜ್ಯ ಮಟ್ಟದ ಪ್ರಶಸ್ತಿಗಳು ಲಭಿಸಿವೆ.

ಐಎಎಸ್ ಅಧಿಕಾರಿಯಾಗಬೇಕೆಂಬ ಆಸೆ ಹೊಂದಿರುವ ಜ್ಞಾನ ಐತಾಳ್ ಓದಿನಲ್ಲಿ ಮುಂದು. ಈಕೆಯ ಕಲಾ ಶ್ರಮಕ್ಕೆ ಅಧ್ಯಾಪಕರ ಪ್ರೋತ್ಸಾಹವೂ ಇದೆ. ಈಕೆ ನಾಂಗೇಂದ್ರ ಐತಾಳ್ ಮತ್ತು ಚಿತ್ರಾ ಅವರ ಪುತ್ರಿ.

■ ನವೀನ್ ಭಟ್

## ನಕ್ಕು ಬಿಡಿ



ಅಧ್ಯಾಪಕ: ನೀನು ದೊಡ್ಡವನಾದ ಮೇಲೆ ಏನು ಆಗ್ತೀಯಾ?
ವಿದ್ಯಾರ್ಥಿ: ಮದುವೆ.
ಅಧ್ಯಾಪಕ: ನೋ. ನಾನು ಕೇಳಿದ್ದು ಏನು ಆಗ್ತೀಯಾ?
ವಿದ್ಯಾರ್ಥಿ: ಮದುಮಗ ಆಗ್ತೇನೆ!
ಅಧ್ಯಾಪಕ: ಓಹೋ! ಐ ಮೀನ್ ಟು ಸೇ, ನೀನು ದೊಡ್ಡವನಾದಾಗ ಏನು ಗಳಿಸ್ತೀಯ ಅಂತ?
ವಿದ್ಯಾರ್ಥಿ: ಮದುಮಗಳನ್ನ.
ಅಧ್ಯಾಪಕ: ಸ್ಟುಪಿಡ್. ನಿನ್ನ ಅಪ್ಪ ಅಮ್ಮನಿಗೆ ಏನು ತಂದು ಕೊಡ್ತೀಯಾ?
ವಿದ್ಯಾರ್ಥಿ: ಸೊಸೆ ತರ್ತೀನೆ ಸರ್.
ಅಧ್ಯಾಪಕ: ಪಾಪಿ ನನ್ ಮಗನೆ. ನಿನ್ನ ಅಪ್ಪ ಅಮ್ಮ ನಿನ್ನಿಂದ ಏನು ಬಯಸ್ತಾರೆ?
ವಿದ್ಯಾರ್ಥಿ: ಮೊಮ್ಮಕ್ಕಳು.
ಅಧ್ಯಾಪಕ: ಓಹ್ ದೇವರೇ! ನಿನ್ನ ಜೀವನದ ಗುರಿ ಏನು?
ವಿದ್ಯಾರ್ಥಿ: ಒಂದು ಬೇಕು, ಎರಡು ಸಾಕು ಸರ್.

★★★

ಮಗ: ಡ್ಯಾಡ್! ಪ್ಲೀಸ್ ಒಂದು ಲೋಟ ನೀರು ತಂದ್ಕೊಡಿ.
ಡ್ಯಾಡ್: ನೀನೇ ಬಂದು ಕುಡಿ.
ಮಗ: ಪ್ಲೀಸ್ ಡ್ಯಾಡ್.
ಡ್ಯಾಡ್: ಇನ್ನೊಂದು ಸಾರಿ ಕೇಳಿದ್ರೆ ಕಪಾಳಕ್ಕೆ ಬಾರಿಸ್ತೀನಿ.
ಮಗ: ಕಪಾಳಕ್ಕೆ ಬಾರಿಸಲು ಬರೋವಾಗ ಒಂದು ಲೋಟ ನೀರನ್ನೂ ತಂದ್ಬಿಡು.

ಸಂಗ್ರಹ: ಎಸ್. ವಿಶ್ವನಾಥ, ಮಂಡ್ಯ

ಗಾಜಿ: (ಎದುರಾದ ವ್ಯಕ್ತಿಯನ್ನು) ಏನಪ್ಪಾ ಈ ಅರ್ಧ ರಾತ್ರೀಲಿ ಒಬ್ಬನೇ ಬರ್ತಾ ಇದ್ದೀಯಲ್ಲಾ. ಇಲ್ಲಿ ದೆವ್ವಗಳಿವೆಯಂತೆ ನಿನ್ಗೆ ಭಯ ಆಗೋಲ್ವಾ?
ವ್ಯಕ್ತಿ: ಏನೋ ಸ್ವಾಮಿ ನನಗೇನು ಗೊತ್ತು. ನಾನು ಸತ್ತೇ ಆರು ವರ್ಷವಾಯ್ತು.

★★★

ಚೆಲುವ: ನೋಡಯ್ಯಾ ಚಾರ್ಮುಡಿ ಘಾಟ್ ನಲ್ಲಿ ನಮ್ಮ ಕಾರ್ ಆಕ್ಸಿಡೆಂಟಾಯ್ತು...
ವೀರ: ಮತ್ತೆ ಹೇಗೆ ಬಚಾವಾದ್ರಯ್ಯಾ?
ಚೆಲುವ: ಆಕ್ಸಿಡೆಂಟಾದ ಮುಕ್ಕಾಲು ಗಂಟೇಲಿ ಆಸ್ಪತ್ರೇಲಿ ಇದ್ವು ಕಣೋ...
ವೀರ: ಅದ್ಹೇಗಯ್ಯಾ ಸಾಧ್ಯ?
ಚೆಲುವ: ನಮ್ಮ ಕಾರಿಗೆ ಗುದ್ದಿದ್ದು ಆಂಬ್ಯುಲೆನ್ಸ್.



ಸಂಗ್ರಹ: ಗೌರಿಬಿದನೂರು ವಿ. ಸತ್ಯನಾರಾಯಣ ರಾವ್